ಓ. ಎಸ್. ನಂ. 214-2017 PW- 1

ದಿನಾಂಕಃ 24-01-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರವಾಗಿ ಶ್ರೀ. V.R.H ವಕೀಲರಿಂದಃ**

9. ನಿಪಿ 1 ರ ಖರೀದಿ ಕರಾರು ಪತ್ರದಲ್ಲಿ , ಸ್ವತ್ತಿನ ಮಾಲೀಕ ಅದೇ ದಿನ ನನ್ನ ಸ್ವಾಧೀನಕ್ಕೆ ಕೊಟ್ಟಿರುವ ಬಗ್ಗೆ ಉಲ್ಲೇಖ ಇದೆ. ಖರೀದಿ ಕರಾರು ಪತ್ರದ ಅನುಸಾರ ರೂ. 19 ಸಾವಿರ ಹಣವನ್ನು ನಗದಿನ ರೂಪದಲ್ಲಿ ನೀಡಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ರಶೀದಿ ಪಡೆದುಕೊಂಡಿಲ್ಲ. ಉಳಿದ ಮೊತ್ತವನ್ನು 6 ತಿಂಗಳ ಒಳಗೆ ಕೊಡಬೇಕೆಂದು ಎಂದು ಉಲ್ಲೇಖ ಇದೆ. ಅದರಂತೆ ಉಳಿದ ಹಣವನ್ನು 6 ತಿಂಗಳ ಒಳಗೆ ನೀಡಿರುತ್ತೇನೆ. ದಿಃ 11-12-1989 ರಂದು 14 ಸಾವಿರ ರೂಪಾಯಿ ಹಣವನ್ನು ನೀಡಿರುತ್ತೇನೆ. ಆ ದಿನವೂ ಸಹ ಪಾವತಿ ರಶೀದಿಯನ್ನು ಪಡೆದುಕೊಂಡಿರುವುದಿಲ್ಲ. ಆ ರೀತಿ ರಶೀದಿಗಳನ್ನು ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

10. ಸದ್ರಿ ಖರೀದಿ ಕರಾರು ಒಪ್ಪಂದ ಪತ್ರವನ್ನು ಕರ್ನಾಟಕ ಗೃಹ ಮಂಡಳಿಗೆ ಹಾಜರುಪಡಿಸಿ, ನಮ್ಮ ಹೆಸರಿಗೆ ಖರೀದಿ ಪತ್ರವನ್ನು ಮಾಡಿಕೊಡುವಂತೆ ಕೋರಿಕೊಂಡಿರುವುದಿಲ್ಲ. ಕರ್ನಾಟಕ ಗೃಹ ಮಂಡಳಿಗೆ ದಾವಾಸ್ವತ್ತನ್ನು ಖರೀದಿ ಮಾಡಿಕೊಂಡ ಬಗ್ಗೆ ಯಾವುದೇ ಪತ್ರವನ್ನು ನೀಡಿರುವುದಿಲ್ಲ. ನಾನು ಪ್ರತಿವಾದಿಯಿಂದ ಒಪ್ಪಂದ ಪತ್ರವನ್ನು ಮಾಡಿಕೊಳ್ಳುವ ಮುಂಚಿತವಾಗಿಯೇ ಕರ್ನಾಟಕ ಗೃಹ ಮಂಡಳಿಯಿಂದ ಲೀಸ್ ಕಂ ಖರೀದಿ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದ್ರಿ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

11. ಲೀಸ್ ಕಂ ಖರೀದಿ ಪತ್ರವು ಯಾವುದೇ ವ್ಯಕ್ತಿಗೆ ಸಂಪೂರ್ಣವಾಗಿ ಮಾಲೀಕತ್ವವನ್ನು ನೀಡಿವುದಿಲ್ಲ ಎಂದರೆ ಸರಿ. ಖರೀದಿ ಪತ್ರವೂ 10 ರೂಪಾಯಿ ಮುಖ ಬೆಲೆಯ ಸ್ಟಾಂಪ್ಯನ ಒಟ್ಟು 6 ಪುಟಗಳನ್ನು

ಹೊಂದಿರುತ್ತದೆ. ಸಾಕ್ಷಿಯು ಮುಂದುವರೆದು ಖರೀದಿ ಪತ್ರವೂ 5 ರೂಪಾಯಿ ಮುಖ ಬೆಲೆಯ ಸ್ಟಾಂಪ್ಸನ ಒಟ್ಟು 4 ಪುಟಗಳನ್ನು ಹೊಂದಿರುತ್ತದೆ ಎಂದು ನುಡಿಯುತ್ತಾರೆ. ಖರೀದಿ ಪತ್ರದ ಪ್ರತಿಯೊಂದು ಪುಟದ ಮೇಲೆ ಸಹಿ ಮಾಡಿರುತ್ತೇನೆ. ಪ್ರತಿವಾದಿಯು ಪ್ರತಿಯೊಂದು ಪುಟದಲ್ಲಿ ಸಹಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲಾ. ಸಾಕ್ಷಿದಾರರು ಪ್ರತಿ ಪುಟದ ಮೇಲೆ ಸಹಿ ಮಾಡಿಲ್ಲ. ಸದ್ರಿ ಪತ್ರಕ್ಕೆ ಒಟ್ಟು 6 ಸಾಕ್ಷಿದಾರರು ಇರುತ್ತಾರೆ . 5 ನೇ ಸಾಕ್ಷಿದಾರರಾಗಿ ಉಮಾ ವಿಶ್ವನಾಥರವರು ಸಹಿ ಮಾಡಿರುತ್ತಾರೆ. ನೋಟರಿ ರವರು ಸಹ ಪ್ರತಿ ಪುಟಕ್ಕೆ ಸಹಿ ಹಾಕಿಲ್ಲ.

12. ನಿಪಿ 1 ಕರಾರು ಪತ್ರಕ್ಕೂ ಮೊದಲು ಬೇರೆ ಯಾವುದೇ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ದಿಃ 03-01-1989 ರಂದು ನಾನು ದಾವಾಸ್ತಿಗೆ ಸಂಬಂಧಿಸಿದಂತೆ ವಿಶ್ವನಾಥ ಕಳತೋಲಕರರವರಿಂದ ಮತ್ತೊಂದು ಖರೀದಿ ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದು ಇದೆ ಎಂದರೆ ಸರಿ. ಸದ್ರಿ ಕರಾರು ಪತ್ರವನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸದ್ರಿ ವಿಷಯವನ್ನು ನನ್ನ ದಾವಾಸ್ವತ್ತಿನಲ್ಲಿ ತಿಳಿಸಿಲ್ಲ ಎಂದರೆ ಸರಿ. ಸದ್ರಿ ವಿಷಯವನ್ನು ನೋಟೀಸನಲ್ಲಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ಸದ್ರಿ ಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ ಅವರಿಗೆ ಯಾವುದೇ ಮುಂಗಡ ಹಣವನ್ನು ನೀಡಿರುವುದಿಲ್ಲ. ಸದ್ರಿ ಕರಾರು ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲಾ. ಸದ್ರಿ ಕರಾರು ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲಾ. ಸದ್ರಿ ಪತ್ರವನ್ನು ಬರೆದ ವ್ಯಕ್ತಿ ಸಹಿ ಮಾಡಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲಾ. ಸದ್ರಿ ಕರಾರು ಪತ್ರ ನನ್ನ ಬಳಿ ಇರಬಹುದು, ಇದ್ದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದ್ರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಈ ಮೊದಲು ಹಾಜರುಪಡಿಸಿಲ್ಲ. ಸದ್ರಿ ಕರಾರು ಪತ್ರವನ್ನು ಎಷ್ಟು ರೂಪಾಯಿ ಸ್ಟ್ಯಾಂಪ ಪೇಪರ ಮೇಲೆ ಬರೆಯಲಾಗಿದೆ ಎಂದು ನನಗೆ

ನೆನಪಿಲ್ಲಾ. ಇವುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಕರಾರು ಪತ್ರವನ್ನು ನಾನು ಮಾಡಿಕೊಂಡಿಲ್ಲ. ಖರೀದಿ ಪತ್ರವನ್ನು ಮಾಡಿಕೊಳ್ಳಲು ಹಾಗೂ ನೋಂದಾಯಿಸಲು ಕೇವಲ ಮಾಲೀಕನಿಗೆ ಮಾತ್ರ ಹಕ್ಕು ಇರುತ್ತದೆ ಎಂಬ ವಿಷಯ ನನಗೆ ಗೊತ್ತು.

13. ನಿಪಿ 4 ಪ್ರಕಟಣೆಯನ್ನ ನಾನೇ ನೀಡಿರುತ್ತೇನೆ. ವಿಶ್ವನಾಥರವರು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸುಮಾರು 5-6 ಜನರು ಬಂದು ಸದ್ರಿ ಮನೆಯನ್ನು ನೋಡಿಕೊಂಡು ಹೋಗಿರುತ್ತಾರೆ. ನನಗೆ ಆಗ ಇಬ್ಬರು ಮಕ್ಕಳು ಸುಮಾರು ಒಂದೂವರೆ ವರ್ಷದವರು ಇದ್ದು, ಆ ಕಾಲಕ್ಕೆ ಖರೀದಿಗೆ ಬಂದವರು ಬೂಟ್ ಧರಿಸಿ ಮನೆಯ ಒಳಗೆ ಬಂದು ಹೋಗಿದ್ದ ವಿಷಯವನ್ನು ನನ್ನ ತಾಯಿಯವರು ನನಗೆ ತಿಳಿಸಿರುತ್ತಾರೆ. ನಾವು ನಿಪಿ 4 ಪ್ರಕಟಣೆಯನ್ನು ದಾವೆಯನ್ನು ಸಲ್ಲಿಸಿದ ಬಳಿಕ ಹಾಕಿರುತ್ತೇವೆ. ಸದ್ರಿ ವಿಷಯವನ್ನು ನೋಟೀಸನಲ್ಲಿ ಹಾಗೂ ದಾವೆಯಲ್ಲಿ ತಿಳಿಸಿಲ್ಲ. ಆ ರೀತಿ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ . ಈಗ ನನ್ನ ಇಬ್ಬರು ಮಕ್ಕಳಿಗೆ 35-36 ವರ್ಷಗಳಾಗಿರುತ್ತವೆ.

14. ನಿಪಿ 4 ರಲ್ಲಿ ತಿಳಿಸಿರುವಂತೆ ಪ್ರತಿವಾದಿಯು ದಾವಾಸ್ತಿಯನ್ನು ಒತ್ತೆ ಇಟ್ಟು ಸಾಲ ಪಡೆದುಕೊಂಡ ಸಾಧ್ಯತೆ ಇದೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದ್ರಿ ಪ್ರಕಟಣೆಯನ್ನು ಖಚಿತ ಮಾಹಿಯ ಮೇರೆಗೆ ನೀಡಿರುತ್ತೇನೆ. ಪ್ರತಿವಾದಿಯು ಖುದ್ದಾಗಿ ಮಾಹಿತಿಯನ್ನು ನೀಡಿಲ್ಲ. ಸದ್ರಿ ಮಾಹಿತಿಯನ್ನು ಯಾರು ನನಗೆ ತಿಳಿಸಿರುತ್ತರೆ ಎಂದು ನನಗೆ ನೆನಪಿಲ್ಲಾ. ಸದ್ರಿ ಪ್ರಕಟಣೆಯಲ್ಲಿ ನಿ.ಡಿ 1 ರ ಕರಾರು ಪತ್ರದ ಉಲ್ಲೇಖವನ್ನು ನಮೂದಿಸಿಲ್ಲ. ನನಗೆ ಆ ರೀತಿ ಪ್ರಕಟಣೆಯನ್ನು ನೀಡಲು ಯಾವುದೇ ಹಕ್ಕು ಇರುವುದಿಲ್ಲಆದರೂ ಸಹ ನಾನು ಸುಳ್ಳು ಪ್ರಕಟಣೆಯನ್ನು

ನೀಡಿರುತ್ತೇನೆ ಎಂದರೆ ಸರಿಯಲ್ಲ.     ಸುಳ್ಳು ಕರಾರು ಪತ್ರಕ್ಕೆ ಅನುಗುಣವಾಗುಂತೆ ಸುಳ್ಳು ಪ್ರಕಟಣೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ